ದಿನಾಂಕಃ 09-07-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀ. ಆರ್. ಪಿ. ವಕೀಲರಿಂದ

1. ನಿಪಿ.1 ರಲ್ಲಿ ಇರುವ ಸಹಿ ನನ್ನ ಸಹಿ ಇರುತ್ತದೆ ಎಂದರೆ ಸರಿ. ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನನಗೆ ನೀಡಿದ ನೋಟೀಸು ನನಗೆ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.5 ಅಂಚೆ ಹಿಂಬರಹದಲ್ಲಿ ಇರುವ ಸಹಿ ನನ್ನ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ಇರುವ ಸಹಿ ನನ್ನ ಸಹಿ ಇದ್ದರೂ ಸಹ ಅದು ನನ್ನ ಸಹಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ರಮ್‌ಜಾನ್ ಬೆನೆಫಿಟ್ ಸ್ಕೀಮ್ ನಡೆಸುತ್ತಿದ್ದೆನು ಎಂದು ಹೇಳಿದ್ದು ಅದನ್ನು ನಾನು 3 ವರ್ಷಗಳ ಕಾಲ ನಡೆಸಿದ್ದೆನು. ಸದರಿ ಸ್ಕೀಮ್ ನ್ನು ನಾನು 2019 ನೇ ಇಸವಿಯಿಂದ 2021 ನೇ ಇಸವಿಯವರೆಗೆ ನಡೆಸಿದ್ದೆನು. ಸದರಿ ಸ್ಕೀಮ್ ನ್ನು ನಡಸೆಲು ನಾನು ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ ಪರವಾನಿಗೆ ಪಡೆದಿರಲಿಲ್ಲ. ಸದರಿ ಸ್ಕೀಮ್ ನಲ್ಲಿ ಸುಮಾರು 250 ಜನ ಸದಸ್ಯರು ಇದ್ದರು. ನಾಗಮಂಗಲದಿಂದ ಕುರಮ್ ಪಾಷ ಎಂಬುವವರು ಮಾತ್ರ ಸದಸ್ಯರು ಇದ್ದರು. ಸಾಕ್ಷಿ ಮುಂದುವರೆದು ಅವರೊಬ್ಬರೇ 140 ಕಾರ್ಡ್‌ಗಳನ್ನು ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ನಾನು ಸದರಿ ಸ್ಕೀಮ್ ನ್ನು ನಡೆಸುತ್ತಿದ್ದೆನು ಮತ್ತು ಕುರಮ್ ಪಾಷ ರವರು ಸದರಿ ಸ್ಕೀಮಿನ ಸದಸ್ಯರಾಗಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಕುರಮ್ ಪಾಷ ರವರ ಅಕ್ಕ ನೂರಜಹಾನ್ ಮೈಸೂರಿನ ನನ್ನ ಮನೆಯ ಪಕ್ಕದ ಬೀದಿಯಲ್ಲಿ ಇದ್ದು ಅವರ ಮುಖಾಂತರ ನಾನು ಸ್ಕೀಮ್ ನ್ನು ನಡೆಸುತ್ತಿದ್ದ ವಿಚಾರ ಕುರಮ್ ಪಾಷ ರವರು ತಿಳಿದುಕೊಂಡಿದ್ದರು. ಸದರಿ ನೂರಜಹಾನ್ ಸಹ ನಾನು ನಡೆಸುತ್ತಿದ್ದ ಸ್ಕೀಮಿನಲ್ಲಿ ಒಬ್ಬ ಸದಸ್ಯರಾಗಿದ್ದರು.

2. ನಾನು ನಡೆಸುತ್ತಿದ್ದ ಸ್ಕೀಮ್ ಮುಗಿದ 20 ದಿನಗಳ ನಂತರ ಚೆಕ್ಕನ್ನು ವಾಪಸ್ಸು ಕೊಡುವಂತೆ ನಾನು ಸದರಿ ಕುರಮ್ ಪಾಷ ರವರ ಬಳಿ ಕೇಳಿದ್ದೆನು. ಆಗ ಅವರು ಲಾಕ್ ಡಾನ್ ಇರುವ ಕಾರಣ ನಾನು ಮೈಸೂರಿಗೆ ಬರಲು ಆಗಿಲ್ಲ ನಾನು ಮೈಸೂರಿಗೆ ಬಂದಾಗ ಚೆಕ್ಕನ್ನು ತಂದು ನಿಮಗೆ ಕೊಡುತ್ತೇನೆ ಎಂದು ಹೇಳಿದ್ದರು.

ಕುರಮ್ ಪಾಷ ರವರು ನನಗೆ ಚೆಕ್ಕನ್ನು ವಾಪಸ್ಸು ಕೊಡದೇ ಇದ್ದಾಗ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೋರಿ ನಾನು ಅವರಿಗೆ ನೋಟೀಸು ನೀಡಿರಲಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ದೂರನ್ನು ನೀಡಲು ಹೋದಾಗ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದೆ ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಪೋಲಿಸರು ನನಗೆ ಹೇಳಿದ್ದರು. ಈ ಪ್ರಕರಣ ದಾಖಲಾಗುವ ಮೊದಲು ನಾನು ಪೋಲಿಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ.

3. ಈ ಪ್ರಕರಣ ದಾಖಲಾಗಿರುವ ವಿಚಾರವನ್ನು ಪೋಲಿಸರು ನನಗೆ ದೂರವಾಣಿ ಮೂಲಕ ತಿಳಿಸಿದ್ದರು. ಈ ಪ್ರಕರಣ ದಾಖಲಾದ ನಂತರ ನಾನು ಸದರಿ ಕುರಮ್ ಪಾಷ ರವರನ್ನು ಭೇಟಿ ಮಾಡಲು ಪ್ರಯತ್ನಿಸಿರಲಿಲ್ಲ.

4. ನನ್ನ ಗೃಹ ಕೃತ್ಯದ ಖರ್ಚುಗಳಿಗೆ ಹಾಗೂ ಇತರೆ ಸಾಲ ಮರು ಪಾವತಿ ಮಾಡಲು ನನಗೆ ಹಣದ ಅವಶ್ಯಕತೆ ಇದ್ದ ಕಾರಣ ದಿನಾಂಕಃ 15-03-2022 ರಂದು ನಾನು ಫಿರ್ಯಾದುದಾರರಿಂದ 1,50,000/- ರೂಪಾಯಿಗಳನ್ನು ಪಡೆದುಕೊಂಡು ಅದನ್ನು 3 ತಿಂಗಳ ಒಳಗಾಗಿ ಮರು ಪಾವತಿ ಮಾಡುವುದಾಗಿ ಹೇಳಿದ್ದೆನು ಎಂದರೆ ಸರಿಯಲ್ಲ. 3 ತಿಂಗಳು ಕಳೆದ ನಂತರ ನಾನು ಹಣ ಪಾವತಿ ಮಾಡದೇ ಇದ್ದಾಗ ಫಿರ್ಯಾದುದಾರರು ನನ್ನ ಬಳಿ ಹಣವನ್ನು ಕೇಳಿದಾಗ ಅದರ ಮರು ಪಾವತಿ ಬಾಬ್ತು ನಾನು ನಿಪಿ.1 ರ ಚೆಕ್ಕನ್ನು ಫಿರ್ಯಾದುದಾರರಿಗೆ ನೀಡಿದ್ದೆನು ಎಂದರೆ ಸರಿಯಲ್ಲ. ಫಿರ್ಯಾದುದಾರರು ಟೈಲರ್ ಆಗಿದ್ದು ಟೈಲರಿಂಗ್ ಕೆಲಸದಿಂದ ಬಂದ ಆದಾಯದ ಹಣವನ್ನು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ಫಿರ್ಯಾದುದಾರರಿಗೆ ಹಣವನ್ನು ಮರು ಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮತ್ತು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.